# <u>ವಾಯು ಕುಮಾರಗೆ ಮಂಗಳ</u>

**Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchhu Rayaru.

ರಾಗ: ಪಾಡಿ ತಾಳ: ಆದಿ

ವಾಯು ಕುಮಾರಗೆ ಮಂಗಳ ರಘು –
ರಾಯ ಸೇವಕಗೆ ಮಂಗಳ ॥ ಪ ॥

ಅಂಜನಿ ಗರ್ಭ ಸಂಜಾತಗೆ ಮಂಗಳ
ರಂಜಿತ ದಿವ್ಯ ಮೂರ್ತಿಗೆ ಮಂಗಳ
ಮಂಜುಳ ಕೀರ್ತಿ ಮಾಹತ್ಮ್ಯಗೆ ಮಂಗಳ
ಸಂಜೀವ ರಾಯಗೆ ಮಂಗಳ ॥ 1 ॥

ದನುಜನಿಕರ ಸಂಹಾರಗೆ ಮಂಗಳ
ಜಾನಕಿ ಶೋಕ ವಿನಾಶಗೆ ಮಂಗಳ
ವನಧಿ ನಿರೋಧಿಗೆ ಮಂಗಳ ಜಯ
ಹನುಮ ವಿಲಾಸಗೆ ಮಂಗಳ ॥ 2 ॥

ಸೇತುವೆಗಟ್ಟಿದಾತಗೆ ಮಂಗಳ
ಸೀತೆಯ ತಂದ ಬಂಟಗೆ ಮಂಗಳ
ಖ್ಯಾತ ಪುರಂದರ ವಿಠಲನ ಕರುಣೆಗೆ
ಪಾತ್ರನಾದ ಭಕುತಗೆ ಮಂಗಳ ॥ 3 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಅಂಜನಿ ಗರ್ಭ ಸಂಜಾತ** = ಹನುಮಂತ, ವಾಯು ದೇವರ ಮೊದಲನೆಯ ಅವತಾರ

**ರಂಜಿತ** = ಮೋಹಕ

**ಸಂಜೀವರಾಯ** = ಹನುಮಂತ ದೇವರು

**ವನದಿ ನಿರೋಧಿ** = ಸಮುದ್ರವನ್ನು ಸೇತುವಿನಿಂದ ಬಂಧಿಸಿದವ

**Classification:** Keerthane
**Ankita:** purandara vittala
**Location:** NA
**Category:** Mangala Song, Hanuma Stuti
**Sub-Category:** hanuma, mangala, divya, kirthi, sita, dukha, Samudra, karuna,
**Pravachana:** NA
**Explanation:** NA